ಸಂಪ್ರದಾಯಗಳನ್ನು ಅತ್ಯಂತ ಅನಾಗರಿಕ ಎಂದು ಆಧುನಿಕ ವಿಚಾರವಾದಿಗಳು ಕಟುವಾಗಿ ಟೀಕಿಸುತ್ತಾರೆ. ಆದರೆ ಇಂತಹ ಸಂಪ್ರದಾಯಗಳು ಬಹಳವಾಗಿ ಕಡಮೆಯಾಗುತ್ತಿದ್ದರೂ ಅವು ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಜನರು ಭಯಂಕರವಾದುದನ್ನು ಪೂಜಿಸದಿರಬಹುದು, ಆದರೆ ಭಯಂಕರವಾದುದನ್ನು ನೋಡಲು ಇಷ್ಟಪಡುತ್ತಾರೆ. ಬೀಭತ್ಸ ಸಿನಿಮಾ (horror films) ನೋಡಲು ಜನ ಮುನ್ನುಗ್ಗುತ್ತಾರೆ. ನರಬಲಿಯನ್ನು ಅಮಾನವೀಯ ಎಂದು ನಿಂದಿಸುತ್ತಾರೆ, ಜನರನ್ನು ನಿರ್ದಯವಾಗಿ ಸಾಯಿಸುತ್ತಾರೆ. ಪಶುಬಲಿಯನ್ನು ಬರ್ಬರಕೃತ್ಯವೆಂದು ಬಡಬಡಿಸುತ್ತಾರೆ, ಅನೇಕ ಪ್ರಾಣಿಗಳನ್ನು ಕೊಂದು ತಿನ್ನುತ್ತಾರೆ. ದೇವರಿಗೆ ಅರ್ಪಿಸಿದರೆ ಅದು ಅನಾಗರಿಕ, ನಾವೇ ತಿಂದರೆ ಅದು ನಾಗರಿಕ! ಎಂಥ ವಿರೋಧಾಭಾಸ! ಮನುಷ್ಯನಲ್ಲಿ ರೌದ್ರ ಮತ್ತು ಸೌಮ್ಯ ಸ್ವಭಾವಗಳೆರಡೂ ಇವೆ ಹಾಗೂ ಎರಡನ್ನೂ ಅವನು ಪೂಜಿಸುವುದು ಸ್ವಾಭಾವಿಕ. ಒಂದನ್ನು ತಪ್ಪು ಎಂದು ನಿಲ್ಲಿಸಿದರೆ ಅದು ಬೇರೊಂದು ರೂಪದಲ್ಲಿ ವ್ಯಕ್ತವಾಗುತ್ತದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಕಾರ್ಲ್ ಯೂಂಗ್ ಹೇಳುತ್ತಾರೆ: ಆಧುನಿಕ ಮಾನವನಿಗೆ ವಾಸ್ತವತೆಯು ಕಾಣುತ್ತಿಲ್ಲ. ಅವನು ಎಷ್ಟೇ ವೈಚಾರಿಕನಾಗಿದ್ದರೂ ದಕ್ಷನಾಗಿದ್ದರೂ ತನ್ನ ಹಿಡಿತಕ್ಕೆ ಮೀರಿದ 'ಶಕ್ತಿಗಳಿಂದ' ಅವನು ಅಭಿಭೂತನಾಗಿರುವನು. ಅವನ ದೇವತೆಗಳು, ರಾಕ್ಷಸರು ನಿಜವಾಗಿಯೂ ಕಣ್ಮರೆಯಾಗಿಲ್ಲ. ಅವು ಹೊಸ ಹೆಸರನ್ನು ಪಡೆದಿವೆ ಅಷ್ಟೇ. ಅವು ಪ್ರಕ್ಷುಬ್ಧತೆ, ಅನಿರ್ದಿಷ್ಟ ಭಯ, ಮಾನಸಿಕ ಗೊಂದಲ, ಕೊನೆಯಿಲ್ಲದ ಮಾತ್ರೆಭಕ್ಷಣ, ಮದ್ಯಪಾನ, ಅಸಂಖ್ಯ ಮನೋರೋಗಗಳು– ಇವೇ ಮುಂತಾದ ರೂಪದಲ್ಲಿ ಮಾನವನನ್ನು ಕುಣಿಸುತ್ತಿವೆ.

ಇದೊಂದು ವಿಚಿತ್ರ ಪ್ರಪಂಚ. ಯಾವುದು ನಾಗರಿಕ, ಯಾವುದು ಅನಾಗರಿಕ ಒಂದೂ ಅರ್ಥವಾಗುವುದಿಲ್ಲ. ಇದು ವೈರುಧ್ಯಗಳ ಗೊಂದಲ. ಇದೇ ಮಾಯೆ, ಇದೇ ವಿಶ್ವರೂಪ. ಶ್ರೀವಿದ್ಯಾರಣ್ಯರು ಇದನ್ನು ಸುಂದರವಾದ ಮಾತುಗಳಲ್ಲಿ ಹೇಳುತ್ತಾರೆ:

**ನ ಜಾನಾಮಿ ಕಿಮಪ್ಯೇತದಿತ್ಯಂತೇ ಶರಣಂ ತವ ।**
**ಅತ ಏವ ಮಹಾಂತೋಽಸ್ಯ ಪ್ರವದಂತೀಂದ್ರಜಾಲತಾಮ್ ॥**

ಕೊನೆಗೆ 'ನಾನು ಇದನ್ನು ಸ್ವಲ್ಪವೂ ಅರಿಯೆನು, ನಿನಗೆ ಶರಣು' ಎಂದು ಹೇಳಬೇಕಾಗುತ್ತದೆ. ಆದುದರಿಂದಲೇ ದೊಡ್ಡ ಮುನಿಗಳು ಈ ಜಗತ್ತು ಇಂದ್ರಜಾಲವೆಂದು ಹೇಳುತ್ತಾರೆ. *(ಪಂಚದಶೀ,* ಚಿತ್ರದೀಪವಿವೇಕ, *೧೪೬).*

ಆದ್ದರಿಂದಲೇ ಶ್ರೀಕೃಷ್ಣನು ಕೊನೆಯಲ್ಲಿ ಹೇಳುತ್ತಾನೆ:

**ಮತ್ಕರ್ಮಕೃತ್ ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ॥** *(೧೧.೫೫)*

ಯಾರು ಎಲ್ಲ ಕರ್ಮಗಳನ್ನೂ ನನಗಾಗಿಯೇ ಮಾಡುತ್ತಾರೊ, ನನ್ನಲ್ಲಿಯೇ ನಿಷ್ಠೆಯುಳ್ಳವನೊ, ನನ್ನ ಭಕ್ತನೊ, ಎಲ್ಲ ಸಂಗವನ್ನೂ ತೊರೆದವನೊ ಹಾಗೂ ಯಾರ ವಿಷಯದಲ್ಲಿಯೂ ದ್ವೇಷಭಾವ ವಿಲ್ಲದವನೊ ಅವನು ನನ್ನನ್ನೇ ಪಡೆಯುತ್ತಾನೆ.

**ಮತ್ಕರ್ಮಕೃತ್** ಎಂದರೆ ಭಗವಂತನಿಗೆ ಸಂಬಂಧಪಟ್ಟ, ಪೂಜೆ, ದೇವಾಲಯಕ್ಕೆ ಸಂಬಂಧಿಸಿದ ಕೆಲಸ, ಸಂಕೀರ್ತನೆ ಇತ್ಯಾದಿಗಳು ಆಗಬಹುದು. ಆದರೆ ಎಲ್ಲ ಕೆಲಸಗಳನ್ನೂ ಅವನಿಗಾಗಿಯೇ ಮಾಡುವುದು ಮುಖ್ಯ. ಕಾಶಿಗೆ ಹೋಗುವಾಗ ವಿಶ್ರಾಂತಿ ಊಟ ಇತ್ಯಾದಿಗಳೆಲ್ಲವೂ ಕಾಶಿಗಾಗಿಯೇ ಇರುತ್ತವೆ. ಆದರೆ ಮಾರ್ಗಮಧ್ಯದಲ್ಲಿ ಯಾವುದೋ ಊರನ್ನು ನೋಡುತ್ತ ಕಾಶಿಯನ್ನು ಮರೆಯಬಾರದು. ಹಾಗೆಯೇ ಎಲ್ಲ ಕಾರ್ಯಗಳನ್ನೂ ಭಗವಂತನಿಗಾಗಿಯೇ ಮಾಡುತ್ತ, ಕೊನೆಗೆ ಕಾರ್ಯದಲ್ಲಿಯೇ ತತ್ಪರರಾಗಿ ಭಗವಂತನೆಡೆಗೆ ಹೋಗುವುದನ್ನು ಮರೆಯಬಾರದು. ಎಪಿಕ್ಟಟಸ್ ಎಂಬ ಚಿಂತಕರು ಇದನ್ನು ಸುಂದರವಾಗಿ ಹೇಳುತ್ತಾರೆ: ನೀವು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದರೆ, ಮತ್ತು ಹಡಗು ಒಂದು ಬಂದರಿನಲ್ಲಿ ನಿಂತುಕೊಂಡಿದ್ದರೆ ನೀವು ಸಮುದ್ರದ ದಡಕ್ಕೆ ಹೋಗಬಹುದು, ಹಾಗೆಯೇ ಓಡಾಡಿಕೊಂಡು ಬರಬಹುದು. ಏನಾದರೂ ವಸ್ತುಗಳನ್ನು ಕೈಗೆತ್ತಿಕೊಂಡು ಕುತೂಹಲದಿಂದ ನೋಡಬಹುದು. ಆದರೆ ತುಂಬ ಎಚ್ಚರಿಕೆಯಿಂದಿರಿ, ಒಂದು ಕಿವಿ ಕ್ಯಾಪ್ಟನ್ ಕರೆಯ ಕಡೆಗೇ ಇರಲಿ. ನಿಮ್ಮ ಗಮನ ಹಡಗಿನ ಕಡೆಗೇ ಇರಲಿ. ಚಿಕ್ಕಪುಟ್ಟ ವಿಷಯಗಳಲ್ಲಿ ಮನಸ್ಸು ಸುಲಭವಾಗಿ ಹರಿದುಹಂಚಿಹೋಗುತ್ತದೆ. ಕಾಪ್ಟನ್ ಕರೆ ಕೇಳುತ್ತಿದ್ದಂತೆಯೇ ಎಲ್ಲವನ್ನು ಆಚೆಗೆ ಎಸೆದು ಹಡಗಿನ ಕಡೆ ಓಡಲು ನಾವು ಸಿದ್ಧರಿರಬೇಕು. *(The Art of Living, p. 14)*

ಈ ರೀತಿ ಏಕನಿಷ್ಠೆ ಇರಬೇಕೆಂಬುದನ್ನು **'ಮತ್ಪರಮ'** ಶಬ್ದವು ಸೂಚಿಸುತ್ತದೆ. **'ಮತ್ಪರಮ'**ನಾಗದೆ ಸಂಪೂರ್ಣ **'ಸಂಗವರ್ಜಿತ'**ನಾಗುವುದು ದುಸ್ಸಾಧ್ಯ. ಆದರೆ ಎಲ್ಲ ಸಂಗವನ್ನು ತ್ಯಜಿಸುವುದು ದ್ವೇಷಭಾವನೆಯಿಂದಲ್ಲ, ತಿರಸ್ಕಾರದಿಂದಲ್ಲ – ಭಗವದ್ಭಕ್ತಿಭಾವದಿಂದ. ಭಕ್ತನ ಭಾವಶಕ್ತಿಯೆಲ್ಲವೂ ಭಕ್ತಿಭಾವವಾಗಿ ಪರಿವರ್ತಿತವಾಗಿರುತ್ತದೆ. ಆದ್ದರಿಂದ ವೈರಮನೋಭಾವಕ್ಕೆ ಅವಕಾಶವೇ ಇರುವುದಿಲ್ಲ, ಅತ್ಯಂತ ಅಪಕಾರ ಮಾಡಿದವರ ಮೇಲೂ ಅವನಿಗೆ ವೈರಭಾವವಿರುವುದಿಲ್ಲ. ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಾರೆ: ಒಬ್ಬ ಗುರುವಿಗೆ ಅನೇಕ ಶಿಷ್ಯರಿರುತ್ತಾರೆ. ಒಬ್ಬ ಶಿಷ್ಯನು ಭಿಕ್ಷೆಗೆ ಹೋಗಿದ್ದಾಗ ದುಷ್ಕರ್ಮಿಗಳು ಕೆಲವರು ಅವನ ಮೇಲೆರಗಿ ಅವನಿಗೆ ಸರಿಯಾಗಿ ಥಳಿಸಿದರು. ಅವನು ಪ್ರಜ್ಞೆತಪ್ಪಿ ಬಿದ್ದುಬಿಟ್ಟನು. ಬೇರೆ ಶಿಷ್ಯರು ಬಂದು ಅವನನ್ನು ಆಶ್ರಮಕ್ಕೆ ಎತ್ತಿಕೊಂಡುಹೋಗಿ ಚೆನ್ನಾಗಿ ಉಪಚರಿಸಲು ಅವನಿಗೆ ಸ್ವಲ್ಪ ಪ್ರಜ್ಞೆ ಬರತೊಡಗಿತು. ಈಗ ಒಬ್ಬ ಶಿಷ್ಯನು ಅವನಿಗೆ ಹಾಲು ಕುಡಿಸತೊಡಗಿದನು. ಅವನಿಗೆ ಪೂರ್ಣ ಪ್ರಜ್ಞೆ ಬಂದಿದೆಯೇ ಎಂಬುದನ್ನು ಪರೀಕ್ಷಿಸಲು, ''ನಿನಗೆ ಈಗ ಹಾಲನ್ನು ಕುಡಿಸುತ್ತಿರುವವರು ಯಾರು?'' ಎಂದು ಒಬ್ಬರು ಅವನನ್ನು ಕೇಳಿದರು. ಅವನು ಕಣ್ಣು ತೆರೆದು ಮಂದಹಾಸವನ್ನು ಬೀರುತ್ತ, ''ನನಗೆ ಯಾರು ಹೊಡೆದನೊ ಅವನೇ ಈಗ ಹಾಲು ಕುಡಿಸುತ್ತಿರುವನು.''

ಈ ರೀತಿ ವೈರಭಾವ, ತಿರಸ್ಕಾರಭಾವ ಇಲ್ಲದೆ ಎಲ್ಲವನ್ನೂ ಸ್ವೀಕರಿಸಬೇಕೆಂಬುದು ವಿಶ್ವರೂಪದರ್ಶನದ ಉದ್ದೇಶ. *

# ಆಧ್ಯಾತ್ಮಿಕ ಸಂಭಾಷಣೆ



## ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

**ರಾಮಕೃಷ್ಣ ಮಹಾಸಂಘದ 12ನೇ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರು ಸಾಧು, ಬ್ರಹ್ಮಚಾರಿಗಳು ಹಾಗೂ ಭಕ್ತರೊಂದಿಗೆ ನಡೆಸುತ್ತಿದ್ದ ಆಧ್ಯಾತ್ಮಿಕ ಸಂಭಾಷಣೆಗಳ ಸರಣಿಯ ಕೆಲವು ಭಾಗಗಳು 2011ರ 'ವಿವೇಕಪ್ರಭ' ಸಂಚಿಕೆಗಳಲ್ಲಿ ಪ್ರಕಟವಾಗಿತ್ತು. ರಾಮಕೃಷ್ಣ ಮಹಾಸಂಘದ ಬಂಗಾಳಿ ಮಾಸಪತ್ರಿಕೆ 'ಉದ್ಬೋಧನ್' ದಲ್ಲಿ ಪ್ರಕಟವಾಗಿದ್ದ ಈ ಸರಣಿಯ ಉಳಿದ ಭಾಗಗಳನ್ನು ಈಗ ಮುಂದುವರಿಸುತ್ತಿದ್ದೇವೆ. ಇದನ್ನು ಸುಲಲಿತವಾಗಿ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವ ಲೇಖಕರು ಕೊಯಮತ್ತೂರು ರಾಮಕೃಷ್ಣ ಮಿಷನ್ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

**ಪ್ರಶ್ನೆ:** ಸ್ವಾಮಿ ವಿವೇಕಾನಂದರ ನೆರೆಹೊರೆಯವರು ಅವರನ್ನು ಅಹಂಕಾರಿ ಎಂದು ನಿಂದಿಸುತ್ತಿದ್ದರು. ಆದರೆ ಅವರ ಜೀವನ ಚರಿತ್ರೆ ಬರೆದವರು ಅದನ್ನು ಆತ್ಮವಿಶ್ವಾಸ ಅಥವಾ Self confidence ಎಂದು ಕರೆದಿದ್ದಾರೆ. Self Confidence ಅಥವಾ Self Assertion ಇದರ ಅರ್ಥ ವ್ಯತ್ಯಾಸವನ್ನು ಹೇಗೆ ತಿಳಿಯಬಹುದು?

**ಮಹಾರಾಜ್:** ಒಬ್ಬ ವ್ಯಕ್ತಿಯನ್ನು ಬರೀ ಆತನ ಆಚಾರ ಅಥವಾ ಮಾತುಗಳಿಂದ ಅಳೆಯಲು ಸಾಧ್ಯವಿಲ್ಲ. ಸ್ವಾಮೀಜಿ ಒಂದು ವೇಳೆ ಅಹಂಕಾರಿಯಾಗಿರುತ್ತಿದ್ದರೆ ಇತರರನ್ನು ತೀರ ತುಚ್ಛ ದೃಷ್ಟಿಯಿಂದ ನೋಡುತ್ತಿದ್ದರು. ಆದರೆ ಅವರು ಹಾಗೆ ಮಾಡುತ್ತಿರಲಿಲ್ಲ. ಅವರು ಹೇಳುತ್ತಿದ್ದರು, ಎಲ್ಲರೊಳಗೂ ಆ ಬ್ರಹ್ಮವಸ್ತು ಇದೆ ಎಂದು. ಆದುದರಿಂದ ಇಲ್ಲಿ ಅಹಂಕಾರದ ಪ್ರಶ್ನೆಯೇ ಏಳುವುದಿಲ್ಲ. ಈ ವಿಚಾರಗಳನ್ನು ಕೂಡ ನಾವು ಪರಾಂಬರಿಸಿ ನೋಡಬೇಕು. ಸ್ವಾಮೀಜಿಯವರು ತನ್ನ ಗುರುಭಾಯಿಗಳಿಗೆ (ಸಹೋದರ ಸಂನ್ಯಾಸಿಗಳು) ಎಷ್ಟೊಂದು ಗದರಿಸುತ್ತಿದ್ದರು! ಭವಿಷ್ಯತ್ತಿನಲ್ಲಿ ಇಡೀ ಸಂಘದ secretary (ಕಾರ್ಯದರ್ಶಿ)ಯ ಭಾರವನ್ನು ಯಾರ ಮೇಲೆ ಹಾಕಲು ನಿಶ್ಚಯಿಸಿದ್ದರೋ, ಅಂತಹ ಸ್ವಾಮಿ ಶಾರದಾನಂದರಿಗೆ, ''ಬಿಡು ಬಿಡು, ನಿನ್ನ ಚಟಾಕಿನಷ್ಟು ಬುದ್ಧಿಯನ್ನು ಉಪಯೋಗಿಸದೆ, ಹಾಗೆಯೇ ದೊಡ್ಡದು ಮಾಡಿ ಇಡು'' ಎಂದು ಗದರಿಸುತ್ತಿದ್ದರು. ಇನ್ನು ಉಳಿದ ಗುರುಭಾಯಿಗಳಿಗೂ ಹೀಗೆಯೇ ಬಯ್ಯುತ್ತಿದ್ದರು. ಇನ್ನು ಶಿಷ್ಯಂದಿರ ಕಥೆ ಕೇಳಲೇಬೇಡಿ! ಆದರೆ ಅವರ ಪ್ರೀತಿವಿಶ್ವಾಸ ನೋಡಬೇಕಿತ್ತು – ಅವರು ಅಷ್ಟೇ ಪ್ರೀತಿಸುತ್ತಿದ್ದರು. ಆದ್ದರಿಂದ ಈ background ನೋಡಿ ಅವರ ಬಗ್ಗೆ ಮಾತನಾಡಬೇಕು.

**ಪ್ರಶ್ನೆ:** ಆತ್ಮಶ್ಲಾಘನೆ – ಇದನ್ನು ಹೇಗೆ ಅರಿಯಬಹುದು? ಇದನ್ನು ವರ್ಜಿಸುವ ಉಪಾಯ ಯಾವುದು?

**ಮಹಾರಾಜ್:** ಇತರರನ್ನು ಅಹಂಕಾರಿ ಎಂದು ಹೇಳುವ ಬದಲು ತನ್ನಲ್ಲಿ ಅಹಂಕಾರ ಉಂಟೋ ಇಲ್ಲವೋ ಎಂಬುದನ್ನು ವಿಚಾರ ಮಾಡಿದರೆ ಆತನಲ್ಲಿ ಅಹಂಕಾರ ನಿಲ್ಲದು; ಓಡಿಹೋಗುತ್ತದೆ. ತನ್ನನ್ನು ತಾನೇ ಪರೀಕ್ಷೆಮಾಡಿ ನೋಡಿದರೆ ಗೊತ್ತಾಗುತ್ತದೆ, ನಿನ್ನ ಎಷ್ಟೋ ವಿಚಾರಗಳು ನಿನಗೆ ತಿಳಿಯದೆ, ಬೇರೆಯವರ ಎದುರು ನೀನೇ ಸಣ್ಣವನಾಗುತ್ತೀ. ಆಗ ಅಲ್ಲಿ ಅಹಂಕಾರವಿರಲು ಅವಕಾಶವೇ ಇಲ್ಲ; ಅಹಂಕಾರ ಅಲ್ಲೆಲ್ಲೂ ಪ್ರವೇಶ ಮಾಡದು.

**ಪ್ರಶ್ನೆ:** ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಜನರು ಎಷ್ಟೊಂದು ಪೂಜೆ ಪುನಸ್ಕಾರ, ಜಪತಪ ಮಾಡುತ್ತಾರೆ; ಆದರೆ ಅವರಿಗೆ ವಿಶ್ವಾಸವಿರುವುದಿಲ್ಲ – ಈ ಮಾತಿನ ಅರ್ಥವೇನು?

**ಮಹಾರಾಜ್:** ಇಷ್ಟೆಲ್ಲ ಮಾಡಿದರೂ 'ಪಾಪ, ಪಾಪ' ಎಂದು ಹೇಳುವುದರಿಂದ ವಿಶ್ವಾಸ ಬರುವುದಿಲ್ಲ. ಜಪತಪ ಮಾಡಿಯೂ 'ನಾನು ಪಾಪಿ, ಪಾಪಿ' ಎಂದು ಹೇಳುತ್ತಾರೆ. ಭಗವನ್ನಾಮದಲ್ಲಿ ವಿಶ್ವಾಸವಿದ್ದವರು, ಯಾರೂ ಕೂಡ ತನ್ನನ್ನು ತಾನೇ 'ಪಾಪಿ, ಪಾಪಿ' ಎಂದು ಹಳಿಯುವುದಿಲ್ಲ. 'ನಾಮಜಪದಿಂದ ನನ್ನ ಸಮಸ್ತ ಪಾಪಗಳೂ (ಸಂಕಷ್ಟ) ದೂರವಾಗುತ್ತವೆ' ಎಂಬ ವಿಶ್ವಾಸವನ್ನು ಇಡಬೇಕು. ಆತನ ಹೆಸರಿನಿಂದ ಸಮಸ್ತ ಮಾಲಿನ್ಯವೂ ಹೊರಟು ಹೋಗುತ್ತದೆ.

**ನಾಮೇತೇ ಕಾಲ-ಪಾಶ ಕಾಟೇ, ಜಟೇ ತಾ ದಿಯಚೆ ರಟೆ,**
**ಆಮ್ರಾ ತೋ ಸೇಇ ಜಟೇರ್ ಮುಟೇ, ಹೋಯೆಛಿ ಆರ್ ಹಬ್‌ಕಾರ್।**
**ನಾಮೇರೆಇ ಭರೊಸಾ ಕೇವಲ್ ಶ್ಯಾಮಾ ಗೋ ತೋಮಾರ್ ।**

'ನಿನ್ನ ನಾಮ ಜಪದಿಂದ ಕಾಲಪಾಶವು ತರಿದುಹೋಗುತ್ತದೆ. ನಾವು ಸಂಸಾರ ಎಂಬ ಜಟೆಯ ಮುಷ್ಟಿಯಲ್ಲಿ ಸಿಲುಕಿಕೊಂಡಿದ್ದೇವೆ. ಇದರಿಂದ ಹೊರಬರಲು ಯಾರಿಗೆ ಸಾಧ್ಯ? ಓ ಶ್ಯಾಮಾ, ಮೃತ್ಯುವಿನಿಂದ ಪಾರಾಗಲು ನಿನ್ನ ನಾಮ(ಜಪ)ದಲ್ಲಿ ಭರವಸೆ ಇಟ್ಟಿದ್ದೇವೆ.'

ಒಬ್ಬ ರಾಜನಿಗೆ ಬ್ರಹ್ಮಹತ್ಯೆಯ ಪಾಪ (ದೋಷ) ಬಂದಿತ್ತು. ಅವನು ಒಬ್ಬ ಋಷಿಯ ಬಳಿಗೆ ಬ್ರಹ್ಮಹತ್ಯಾದೋಷದ ಪರಿಹಾರ ಕೇಳಲು ಹೋದ. ಋಷಿ ಮನೆಯಲ್ಲಿರಲಿಲ್ಲ. ಆತನ ಮಗ ಮನೆಯಲ್ಲಿದ್ದ. ರಾಜ ಋಷಿಪುತ್ರನ ಬಳಿ ಪರಿಹಾರೋಪಾಯವನ್ನು ಕೇಳಿದ. ಮೂರು ಸಲ ರಾಮನಾಮವನ್ನು ಜಪಿಸು, ಇದರಿಂದ ಸರ್ವಪಾಪಗಳೂ ನಾಶವಾಗುತ್ತವೆ ಎಂದ ಋಷಿಪುತ್ರ. ಋಷಿ ಮನೆಗೆ ಬಂದ ಮೇಲೆ ಮಗ ಹೇಳಿದ, ''ಒಬ್ಬ ರಾಜ ಬಂದಿದ್ದ, ಆತನಿಗೆ ಬ್ರಹ್ಮಹತ್ಯಾ ದೋಷ ಬಂದಿತ್ತು, ಅದಕ್ಕೆ ಪ್ರಾಯಶ್ಚಿತ್ತ ಏನೆಂದು ಕೇಳಿದ, ಅದಕ್ಕೆ ನಾನು, ಮೂರು ಸಲ ರಾಮನಾಮ ಜಪಿಸು ಎಂದು ಹೇಳಿದೆ.'' ಅದಕ್ಕೆ ಋಷಿ, ''ಏನು ಹೇಳುತ್ತೀಯಾ? ಒಂದೇ ಒಂದು ಸಲ ರಾಮನಾಮ ಜಪಿಸಿದರೆ, ಕೋಟಿ ಬ್ರಹ್ಮಹತ್ಯಾದೋಷಗಳೂ ಪರಿಹಾರವಾಗುತ್ತವೆ. ಇನ್ನು ಮೂರು ಸಲ ಮಾಡಿದರೆ...?'' ಇದಕ್ಕೆ ಹೆಸರು ವಿಶ್ವಾಸ. ಒಂದೇ ಒಂದು ರಾಮನಾಮ ಜಪದಲ್ಲಿ ಕೋಟಿ ಬ್ರಹ್ಮಹತ್ಯಾ ದೋಷಗಳೂ ಪರಿಹಾರವಾಗುತ್ತವೆ.

**ಪ್ರಶ್ನೆ:** ಮಹಾರಾಜ್, ನಾವು ನಡುನಡುವೆ 'ಭಗವಾನ್‌ಲಾಭ, ಭಗವಾನ್‌ಲಾಭ' (ಭಗವತ್ಸಾಕ್ಷಾತ್ಕಾರ) ಎಂದು ಕೇಳುವುದು ಅಥವಾ